# ಆಹಾ ಸುದ್ದಿ!

★ ಸಸಿತೋಟ



ದೆಹಲಿಯ ಸಂಚಾರ ದಟ್ಟಣೆಯ ಮಧ್ಯೆ ಈ ವ್ಯಕ್ತಿ ಒಂದಲ್ಲ.. ಮೂರು ನಾಯಿಗಳನ್ನು ಸ್ಕೂಟರ್‌ನಲ್ಲಿ ಸಮತೋಲನ ಸಾಧಿಸುತ್ತ ಚಲಾಯಿಸುವ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಕಳೆದ ಹಲವು ವರ್ಷಗಳಿಂದ ಪ್ರತಿ ದಿನ ಈ ದೃಶ್ಯ ಮಾಮೂಲಂತೆ. 'ಇಟ್ ಹ್ಯಾಪನ್ಸ್ ಓನ್ಲಿ ಇನ್ ಇಂಡಿಯ' ಅಲ್ಲವೇ!



ಕೊಲಂಬಿಯಾದಲ್ಲಿ ನಡೆದ ಹಚ್ಚೆ ಪ್ರದರ್ಶನದಲ್ಲಿ ಮೈ ತುಂಬ ಹಚ್ಚೆ ಕೊಚ್ಚಿಸಿಕೊಂಡ ಜೇಕಬ್ ಏಂಜೆಲ್ ಎಂಬಾತನೇ ಪ್ರಮುಖ ಆಕರ್ಷಣೆಯಂತೆ. ಡೆತ್ ಏಂಜೆಲ್ ಎಂದೇ ಖ್ಯಾತ ಈ 'ಕಬ್ ಏಂಜೆಲ್?'



ಇಸ್ರೇಲಿನ ಬೀದಿಗಳಲ್ಲಿ ಸಾವಿರಾರು ಮಂದಿ ಇಂತಹ ದಟ್ಟ ವರ್ಣದ ಪೂರ್ಣ ಉಡುಗೆ ತೊಟ್ಟು ಓಡಾಡುತ್ತಾರಂತೆ. ವಿಶೇಷವೇನಿಲ್ಲ, ಅರೆಬರೆ ಬಟ್ಟೆ ತೊಟ್ಟು ಬೇಸರವಾದಾಗ ಇಂತಹ ಬದಲಾವಣೆಗೆ ತೆರೆದುಕೊಳ್ಳುವ ಹುಕಿ ಬರುತ್ತದೆ ಅಲ್ಲಿಯ ಮಂದಿಗೆ.

ಗಂಟೆಗಟ್ಟಲೆ ಷಾಪಿಂಗ್ ಮಾಡುವ ಪತ್ನಿಯರಿಂದಾಗಿ ಬೋರ್ ಹೊಡೆಸಿಕೊಳ್ಳುವ ಗಂಡಸರಿಗೆಂದೇ ಶಾಂಘೈನ ಮಾಲ್ ಒಂದರಲ್ಲಿ ವಿಡಿಯೋ ಗೇಮ್ ಆಡಲು ಸಣ್ಣ ಸಣ್ಣ ಬೂತ್ ಮಾಡಿದ್ದು ಜನಪ್ರಿಯವಾಗಿದೆಯಂತೆ. ಷಾಪಿಂಗ್‌ನಲ್ಲಿ ಹೆಂಡತಿ ದುಡ್ಡು ಕಳೆಯುತ್ತ ಹೋದರೆ, ಬೂತ್‌ನಲ್ಲಿ ಗಂಡ ಸಮಯ ಕಳೆಯುತ್ತ ಕೂರುವುದು ಮಜವಲ್ಲದೇ ಮತ್ತಿನ್ನೇನು!

ಇತ್ತೀಚೆಗೆ ಅಮೆರಿಕದ ಸಮರ ಕಲೆ ಪಟು ಜಸ್ಟಿನ್ ಕಿಶ್ ಎಂಬಾಕೆ ಪಂದ್ಯದ ಮಧ್ಯೆಯೇ ಮಲ ವಿಸರ್ಜನೆ ಮಾಡಿಕೊಂಡು ನಗೆಪಾಟಲಾಯ್ತಂತೆ. ಅದೂ ಪಂದ್ಯ ಟಿವಿಯಲ್ಲಿ ನೇರ ಪ್ರಸಾರವಾಗುತ್ತಿರುವ ಸಂದರ್ಭದಲ್ಲಿ. ಆದರೆ ಹಿಂಭಾಗ ಒರೆಸುವ ಪೇಪರ್‌ನ ಕಂಪೆನಿಗಳು ಪ್ರಚಾರ ರಾಯಭಾರಿಯಾಗುವಂತೆ ಕೇಳಿ ಜಸ್ಟಿನ್‌ಳ ಹಿಂದೆ ಬಿದ್ದಿವೆಯಂತೆ. ಎಡವಟ್ಟಿನಿಂದಲೂ ದುಡ್ಡು ಮಾಡಬಹುದು ಎಂದು ಗೆಲುವಿನ ನಗೆ ಬೀರುವ ಸರದಿ ಈಗ ಜಸ್ಟಿನ್‌ಳದ್ದು.



ಬೀಜಿಂಗ್‌ನಲ್ಲಿ ಕೆಲಸ ಮಾಡಿ ಸುಸ್ತಾದವರಿಗೆ ಕಚೇರಿ ಕೆಲಸದ ಮಧ್ಯೆಯೇ ಮಲಗಲು ಇಂತಹ ಕೋಶದಂತಹ ಪುಟ್ಟ ಕೋಣೆಗಳನ್ನು ಬಾಡಿಗೆಗೆ ಕೊಡುವ ಹೊಸ ಉದ್ಯಮವೇ ಶುರುವಾಗಿದೆಯಂತೆ. ಸೋಮಾರಿಗೆ ಹಾಸಿಗೆ ಹಾಸಿ ಕೊಟ್ಟಂತೆ ಎನ್ನುವ ಗಾದೆ ಅಲ್ಲಿ ಉಲ್ಟಾ ಆಗಿದ್ದು, ಇನ್ನಷ್ಟು ಕೆಲಸ ಮಾಡಲು ಹಾಸಿಗೆ ಎಂಬಂತಾಗಿದೆ.